# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2017-18ನೇ ಸಾಲಿನ ಆಯವ್ಯಯ ಭಾಷಣದಂತೆ ಮಂಜುಗಡ್ಡೆ ಸ್ಥಾವರಗಳ ಮತ್ತು ಶೈತ್ಯಾಗಾರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ ನೀಡುವ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/62/ಮೀಇಯೋ/2010, ದಿನಾಂಕ: 09-07-2010.

(2) ತಿದ್ದುಪಡಿ ಸಂಖ್ಯೆ: ಪಸಂಮೀ/106/ಮೀಇಯೋ/2011, ದಿನಾಂಕ: 02-06-2011.

(3) ಆದೇಶ ಸಂಖ್ಯೆ: ಪಸಂಮೀ/116/ಮೀಇಯೋ/2012, ದಿನಾಂಕ: 03-09-2012.

(4) ಆದೇಶ ಸಂಖ್ಯೆ: ಪಸಂಮೀ/116/ಮೀಇಯೋ/2012, ದಿನಾಂಕ: 29-12-2012.

(5) ಪತ್ರ ಸಂಖ್ಯೆ: ಮೀನಿ/ಪಂವಾಯೋ(1)/166/2016, ದಿನಾಂಕ: 07-04-2017.

******

## ಪ್ರಸ್ತಾವನೆ:

ರಾಜ್ಯ ಸರ್ಕಾರವು 2017-18 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-66 ರಲ್ಲಿ "ಕಡಲ ತೀರದ 3 ಜಿಲ್ಲೆಗಳಲ್ಲಿ 200 ಮಂಜುಗಡ್ಡೆ ಸ್ಥಾವರಗಳಿಗೆ ಹಾಗೂ 35 ಶೈತ್ಯಾಗಾರಗಳಿಗೆ ನೆರವು ನೀಡಲು ಪ್ರಸ್ತುತ ವಿದ್ಯುಚ್ಛಕ್ತಿ ಮೇಲೆ ನೀಡುವ ಸಹಾಯಧನ ಪ್ರತಿ ಯುನಿಟ್‌ಗೆ ರೂ.1.50 ಇರುವುದನ್ನು ಪ್ರತಿ ಯುನಿಟ್‌ಗೆ ರೂ.1.75ಗೆ ಹೆಚ್ಚಿಸಲು ಹಾಗೂ ಪ್ರತಿವರ್ಷ ಪ್ರತಿ ಸ್ಥಾವರಕ್ಕೆ ಇರುವ ಈಗಿನ ಮಿತಿ 3 ಲಕ್ಷ ರೂ.ಗಳಿಂದ 3.50 ಲಕ್ಷ ರೂ.ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಿದೆ. ಇದಕ್ಕಾಗಿ 6 ಕೋಟಿ ರೂ.ಗಳನ್ನು ಒದಗಿಸಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಆದೇಶ ಮತ್ತು ತಿದ್ದುಪಡಿಯಲ್ಲಿ, ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 180ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತೀ ಯೂನಿಟ್‌ಗೆ ರೂ.1.00 ರಂತೆ ಘಟಕ ಒಂದಕ್ಕೆ ಗರಿಷ್ಠ ರೂ.2.00 ಲಕ್ಷಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡುವ ಯೋಜನೆಗೆ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, ಸದರಿ ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ನೀಡುತ್ತಿದ್ದ ರೂ.1.00ರ ಸಹಾಯಧನ ಮಾರ್ಪಡಿಸಿ ಯೂನಿಟ್ ಒಂದಕ್ಕೆ ರೂ.1.25 ರಂತೆ ಘಟಕ ಒಂದಕ್ಕೆ ಸೀಮಿತಗೊಳಿಸಿ, ಸಹಾಯಧನ ನೀಡುವ ಯೋಜನೆಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ, ಸದರಿ ಆದೇಶವನ್ನು ಪರಿಷ್ಕರಿಸಿ ಪ್ರತಿ ಯೂನಿಟ್‌ಗೆ ಸಹಾಯಧನವನ್ನು 1.5ಕ್ಕೆ ಏರಿಸಿ, ವಾರ್ಷಿಕ ಮಿತಿಯುನ್ನು ರೂ.3.00 ಲಕ್ಷಕ್ಕೆ ನಿಗದಿಪಡಿಸಿ, ದಿನಾಂಕ: 01-04-2012 ರಿಂದ ಅನ್ವಯವಾಗುವಂತೆ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಪತ್ರದಲ್ಲಿ, ಮೀನುಗಾರಿಕೆ ನಿರ್ದೇಶಕರು 2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-66ರ ಘೋಷಣೆಯಂತೆ ಮಂಜುಗಡ್ಡೆ ಸ್ಥಾವರಗಳು ಹಾಗೂ ಶೈತ್ಯಾಗಾರಗಳಿಗೆ ವಿದ್ಯುತ್ ಮೇಲೆ ನೀಡುವ ಸಹಾಯಧನವನ್ನು ಪ್ರತಿ ಯೂನಿಟ್‌ಗೆ ರೂ.1.75 ನಂತೆ ನೀಡಲು ಹಾಗೂ ಪ್ರತಿ ಘಟಕಕ್ಕೆ ಗರಿಷ್ಟ ರೂ.3.5 ಲಕ್ಷಗಳ ವಾರ್ಷಿಕ ಸಹಾಯಧನ ನೀಡಲು ಹಾಗೂ ಈ ಹೆಚ್ಚಳವು ದಿನಾಂಕ: 1-4-2017ರ ನಂತರದ ವಿದ್ಯುತ್ ಬಿಲ್‌ಗಳಿಗೆ ಅನ್ವಯವಾಗುವಂತೆ ಅನುಬಂಧದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 64 ಮೀಇಯೋ 2017, ಬೆಂಗಳೂರು ದಿನಾಂಕ: 10-05-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2017-18 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-66 ರಲ್ಲಿನ ಕಡಲ ತೀರದ 3 ಜಿಲ್ಲೆಗಳಲ್ಲಿ 200 ಮಂಜುಗಡ್ಡೆ ಸ್ಥಾವರಗಳಿಗೆ ಹಾಗೂ 35 ಶೈತ್ಯಾಗಾರಗಳಿಗೆ ನೆರವು ನೀಡಲು ಪ್ರಸ್ತುತ ವಿದ್ಯುಚ್ಛಕ್ತಿ ಮೇಲೆ ನೀಡುವ ಸಹಾಯಧನ ಪ್ರತಿ ಯುನಿಟ್‌ಗೆ ರೂ.1.50 ಇರುವುದನ್ನು ಪ್ರತಿ ಯುನಿಟ್‌ಗೆ ರೂ.1.75ಗೆ ಹೆಚ್ಚಿಸಲು ಹಾಗೂ ಪ್ರತಿವರ್ಷ ಪ್ರತಿ ಸ್ಥಾವರಕ್ಕೆ ಇರುವ ಈಗಿನ ಮಿತಿ 3 ಲಕ್ಷ ರೂ.ಗಳಿಂದ 3.50 ಲಕ್ಷ ರೂ.ಗಳಿಗೆ ಹೆಚ್ಚಿಸುವ ಕಾರ್ಯಕ್ರಮಕ್ಕೆ ಅಗತ್ಯವಿರುವ ರೂ.600.00 ಲಕ್ಷ (ಆರುನೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ 2405-00-110-0-03 ರಡಿಯಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಪರಿಷ್ಕರಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/27/ಪಿಎಫ್‌ಒ/2017, ದಿನಾಂಕ: 24-04-2017 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/317/ವೆಚ್ಚ-4/2017, ದಿನಾಂಕ: 03-05-2017 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/5/17

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

TCK 10.5.17.

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.

-3-

4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

ಆದೇಶ ಸಂಖ್ಯೆ: ಪಸಂಮೀ 64 ಮೀಇಯೋ 2017, ಬೆಂಗಳೂರು ದಿನಾಂಕ: 10-05-2017ರ

## ಅನುಬಂಧ

## "ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ" ಅನುಷ್ಠಾನಗೊಳಿಸಲು ಪಾಲಿಸಬೇಕಾದ

## ಷರತ್ತು ಮತ್ತು ನಿಬಂಧನೆಗಳು

- ಈ ಯೋಜನೆಯು ಕರಾವಳಿಯಲ್ಲಿರುವ ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕಗಳಿಗೆ ಅನ್ವಯಿಸುತ್ತದೆ.

- ಪ್ರತಿ ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕವು ಬಳಸಿದ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಮತ್ತು ಪ್ರತಿ ಘಟಕಕ್ಕೆ ರೂ.3.50 ಲಕ್ಷಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡತಕ್ಕದ್ದು.

- ಈ ಯೋಜನೆ ಅಡಿಯಲ್ಲಿ ಸಹಾಯಧನ ಪಡೆಯಲು ಉದ್ದೇಶಿಸಿರುವ ಮಂಜುಗಡ್ಡೆ ಉತ್ಪಾದನಾ ಮತ್ತು ಶೈತ್ಯಾಗಾರ ಘಟಕಗಳು ತಿಳಿಸಿರುವ ಮಾಹಿತಿಯೊಂದಿಗೆ ವರ್ಷದ ಪ್ರಾರಂಭದಲ್ಲಿ ಅರ್ಜಿಯನ್ನು ಸಲ್ಲಿಸಿ, ನೊಂದಣಿ ಮಾಡಿಸಿಕೊಳ್ಳತಕ್ಕದ್ದು. ಹಾಗೂ ಇಲಾಖೆಯಿಂದ ಪ್ರತಿ ಘಟಕಕ್ಕೆ ಗುರುತಿನ ಸಂಖ್ಯೆಯನ್ನು ನೀಡುವುದು ಹಾಗೂ ಈ ಸಂಖ್ಯೆಯನ್ನು ಎಲ್ಲಾ ಪತ್ರವ್ಯವಹಾರಗಳಲ್ಲಿ ನಮೂದಿಸತಕ್ಕದ್ದು.

  (1) ಸಂಸ್ಥೆಯ ಹೆಸರು.

  (2) ಮಾಲೀಕರ ಹೆಸರು ಮತ್ತು ವಿಳಾಸ

  (3) ಘಟಕದ ಮಂಜುಗಡ್ಡೆ ಉತ್ಪಾದನಾ ಸಾಮರ್ಥ್ಯ / ಶೀತಲೀಕರಣ ಘಟಕದ ಸಂಗ್ರಹಣಾ ಸಾಮರ್ಥ್ಯ.

  (4) ನಿರ್ಮಾಣವಾದ ವರ್ಷ

  (5) ನೋಂದಣಿ ಸಂಖ್ಯೆ ಮತ್ತು ವಿದ್ಯುತ್ ಸಂಪರ್ಕದ ಸಂಖ್ಯೆ, ಸಂಸ್ಥೆಯ ಬ್ಯಾಂಕ್ ಖಾತೆಯ ವಿವರ / IFSC ಕೋಡ್, ಖಾತೆ ಸಂಖ್ಯೆ ಇತ್ಯಾದಿ.

  (6) ಸದರಿ ಘಟಕವನ್ನು ಮೀನುಗಾರಿಕೆ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸುತ್ತಿರುವ ಬಗ್ಗೆ ದೃಢೀಕರಣ ಪತ್ರ.

  (7) ಆಧಾರ ಸಂಖ್ಯೆ.

- ಸದರಿ ಮಾಹಿತಿಯನ್ನು ಮೀನುಗಾರಿಕೆ ಇಲಾಖೆಯಲ್ಲಿ ದತ್ತಾಂಶದಲ್ಲಿ ಸಂಗ್ರಹಿಸಿಟ್ಟುಕೊಳ್ಳತಕ್ಕದ್ದು.

- ಪ್ರತಿ 6 ತಿಂಗಳಿಗೊಮ್ಮೆ ಅಂದರೆ ಸೆಪ್ಟಂಬರ್ 30 ಹಾಗೂ ಮಾರ್ಚ್ 31ಕ್ಕೆ ಅಂತ್ಯಗೊಳ್ಳುವ 6 ತಿಂಗಳ ಅವಧಿಗೆ ಪ್ರತಿ ತಿಂಗಳವಾರು ಬಳಸಿದ ವಿದ್ಯುತ್ ಬಿಲ್‌ನ ಯೂನಿಟ್‌ಗಳ ಸಂಖ್ಯೆ ಫಲಾನುಭವಿಗಳು ಸ್ಥಳೀಯ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

- ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ದಾಖಲಾತಿಗಳನ್ನು ಪರಿಶೀಲಿಸಿ ಬಿಲ್‌ಗಳನ್ನು ದೃಢೀಕರಿಸಿ ಸಂಬಂಧಪಟ್ಟ ವಲಯಮಟ್ಟದ ಮೀನುಗಾರಿಕೆ ಉಪ ನಿರ್ದೇಶಕರ ಮೂಲಕವಾಗಿ ಮೀನುಗಾರಿಕೆ ನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

- ಮೀನುಗಾರಿಕೆ ನಿರ್ದೇಶಕರು ಪ್ರತಿ 6 ತಿಂಗಳಿಗೊಮ್ಮೆ ಬಳಸಿದ ವಿದ್ಯುತ್ ಯೂನಿಟ್‌ಗಳನ್ನು ಪರಿಶೀಲಿಸಿ, ಸಹಾಯಧನವನ್ನು ರಾಜ್ಯ ಹುಜೂರ್ ಖಜಾನೆಯಿಂದ ಡಿ.ಸಿ. ಬಿಲ್‌ನ ಮೂಲಕ ಪಡೆದು ಮಂಜುಗಡ್ಡೆ ಉತ್ಪಾದನಾ ಮತ್ತು ಶೀತಲೀಕರಣ ಘಟಕಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸತಕ್ಕದ್ದು.

- ದಿನಾಂಕ: 01-04-2017 ರಿಂದ ಬಳಸಿದ ವಿದ್ಯುತ್ ಯೂನಿಟ್‌ಗಳಿಗೆ ಪರಿಷ್ಕೃತ ಸಹಾಯಧನವು ಅನ್ವಯವಾಗಲಿದೆ. ದಿನಾಂಕ: 01-04-2017ರ ಹಿಂದಿನ ಬಾಕಿ ಇರುವ ವಿದ್ಯುತ್ ಯೂನಿಟ್‌ಗಳ ಮೇಲಿನ ಸಹಾಯಧನವನ್ನು ಈ ಹಿಂದಿನ ಆದೇಶದಂತೆ ಅಂದರೆ ದಿನಾಂಕ: 29-12-2012ರ ಆದೇಶದ ದರದಂತೆ ಪಾವತಿಸತಕ್ಕದ್ದು.

- ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕಕ್ಕೆ ಸಹಾಯಧನವನ್ನು ಪ್ರತಿ ವಿದ್ಯುತ್ ಯೂನಿಟ್‌ಗೆ ರೂ.1.75 ರಂತೆ ಪ್ರತಿ ಅರ್ಧ ವರ್ಷಕ್ಕೆ ರೂ.1.75 ಲಕ್ಷ, ಪ್ರತಿ ವರ್ಷಕ್ಕೆ ರೂ.3.5 ಲಕ್ಷಗಳ ಮಿತಿ ಮೀರದಂತೆ ಮಂಜೂರು ಮಾಡತಕ್ಕದ್ದು.

- ಅನುದಾನದ ತೊಂದರೆಯಾದ ಹಾಗೂ ಇನ್ನಿತರ ಆಡಳಿತಾತ್ಮಕ ಕಾರಣಗಳಿಂದ ಆರ್ಥಿಕ ವರ್ಷದ ಅಂತ್ಯದಲ್ಲಿ ಸಹಾಯಧನ ಕೋರಿ ಬಂದ ಅರ್ಜಿಗಳನ್ನು ಪರಿಗಣಿಸಲು ಸಹಾಯಕವಾಗದಿದ್ದಲ್ಲಿ, ಅರ್ಜಿಗಳ ಜೇಷ್ಠತಾ ಪಟ್ಟಿಗಳನ್ನು ಮಾಡಿ ನಂತರದ ವರ್ಷದ ಪ್ರಾರಂಭದಲ್ಲಿ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಮಂಜೂರು ಮಾಡತಕ್ಕದ್ದು.

- ಸಹಾಯಧನ ನೀಡಿದ ವಿವರಗಳನ್ನು ನೊಂದಣಿ ಪುಸ್ತಕದಲ್ಲಿ ದಾಖಲಿಸಿಟ್ಟುಕೊಳ್ಳುವುದು.

- ಮಂಜುಗಡ್ಡೆ ಸ್ಥಾವರವನ್ನು ಘಟಕದ ಮಾಲೀಕರು ನಿರ್ವಹಿಸಿದ್ದಲ್ಲಿ ಮಾತ್ರ ಸಹಾಯಧನ ಪಡೆಯಲು ಅರ್ಹರಿರುತ್ತಾರೆ. ಘಟಕವನ್ನು ಗುತ್ತಿಗೆಗೆ ನೀಡಿದಲ್ಲಿ ಸಹಾಯಧನ ಪಡೆಯಲು ಅರ್ಹರಾಗಿರುವುದಿಲ್ಲ.

- ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕಗಳನ್ನು ಮಾರಾಟ ಮಾಡಿದ್ದಲ್ಲಿ, ಮಾರಾಟ ಮಾಡಿದ ಒಂದು ವಾರದೊಳಗಾಗಿ ಮೀನುಗಾರಿಕೆ ಇಲಾಖೆಗೆ ಪೂರ್ಣ ದಾಖಲಾತಿಗಳೊಂದಿಗೆ ಮಾಹಿತಿ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ, ಮಾರಾಟ ಮಾಡಿದ ಹಾಗೂ ಖರೀದಿಸಿದ ವ್ಯಕ್ತಿ / ಸಂಸ್ಥೆಗೆ ಸಹಾಯಧನವನ್ನು ನಿಲ್ಲಿಸಬಹುದಾಗಿದೆ.

- ಹೊಸ ಖರೀದಿದಾರರು ತಿಂಗಳ ಆರಂಭದಿಂದ ಅನ್ವಯವಾಗುವಂತೆ ಅವಶ್ಯ ದಾಖಲಾತಿಗಳನ್ನು ಸಲ್ಲಿಸಿ, ಸಹಾಯಧನ ಪಡೆಯಲು ಮೀನುಗಾರಿಕೆ ಇಲಾಖೆಗೆ ನೊಂದಣಿ ಮಾಡಿಸಿಕೊಳ್ಳತಕ್ಕದ್ದು.

10/5/17

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

10.5.17.